ಬೇರೆ. ಅದೂ ಒಂದು ವಿಶಿಷ್ಟವಾದ ಅನುಭವವೇ.

- **ನಿಮ್ಮ ಬರವಣಿಗೆಯ ಮೊದಲ ಕಡತವನ್ನ ಇತರ ಬರಹಗಾರರೊಂದಿಗೆ ಹಂಚಿಕೊಳ್ಳುತ್ತೀರ? ಚರ್ಚಿಸುತ್ತೀರ?**

ಪ್ರಕಟನೆಯ ಮೊದಲು ಕೆಲವರೊಂದಿಗೆ ಕರಡನ್ನು ಹಂಚಿಕೊಳ್ಳುತ್ತೇನೆ. ನಾನು ಪ್ರಯತ್ನಿಸುವ ಸೂಕ್ಷ್ಮ ಸಂಗತಿಗಳು ಅವರಿಗೆ ಅರ್ಥವಾಗುತ್ತದೆನ್ನುವ ಭರವಸೆಯಿರುವುದರಿಂದ ಅವರ ಅಭಿಪ್ರಾಯಗಳನ್ನು ಗಂಭೀರವಾಗಿ ಪರಿಗಣಿಸುತ್ತೇನೆ. ಇಂಥ ಕೆಲವು ಸ್ನೇಹಿತರಿರುವುದಕ್ಕೂ ಅದೃಷ್ಟ ಬೇಕು.

- **ನಿಮ್ಮ ಹೊಸ ನಾಟಕ? ('ಅದರ ಬಗ್ಗೆ ಈಗಲೇ ಮಾತು ಬೇಡ. ಅದೆಲ್ಲ ಬರೆದ ಮೇಲೆಯೇ...' ಎಂದು ಮಾತು ತೇಲಿಸಿದರು!) ನೀವು ಎಲ್ಲಿಯೂ ನಿಮ್ಮ ಹೊಸ ಕೃತಿಯ ಬಗ್ಗೆ ಒಂಚೂರು ಸುಳಿವು ಬಿಟ್ಟುಕೊಡುವುದಿಲ್ಲ. ಈ ನಾಟಕದ ಬಗ್ಗೆಯೂ ನನಗೆ ಮತ್ತೊಬ್ಬರಿಂದ ತಿಳಿಯಿತು. ಯಾಕೆ ನಿಮ್ಮ ಬರವಣಿಗೆಯನ್ನು ಇಷ್ಟು ಗೌಪ್ಯವಾಗಿಡುತ್ತೀರಿ?**

ಗೌಪ್ಯತೆ ಅಲ್ಲ. ಇನ್ನೂ ಬರೆಯದಿರುವುದರ ಬಗ್ಗೆ ಮಾತಾಡಿದರೆ ಅಸ್ಪಷ್ಟವಾಗಿರುವ ಸಂಗತಿಗಳು ಗೋಚರಿಸತೊಡಗುತ್ತವೆ. ನನಗದು ಬರವಣಿಗೆಯಲ್ಲೇ ಸ್ಪಷ್ಟವಾಗಬೇಕು. ಇಲ್ಲದಿದ್ದರೆ ಅದರ ಬಗ್ಗೆ ನನಗೇ ಸ್ವತಃ ಆಕರ್ಷಣೆ ಉಳಿಯುವುದಿಲ್ಲ. ಅಡಿಗೆಯ ಬಗ್ಗೆ ಮಾತನಾಡಿ ಪ್ರಯೋಜನವಿಲ್ಲ, ಮಾಡಿ ಬಡಿಸಿದಾಗಲೇ ಅದು ನಿಜ. ಇದೂ ಹಾಗೆಯೇ.

- **ಕತೆಗಾರ, ಕಾದಂಬರಿಕಾರರಾಗಿ ನೀವು ವಿಮರ್ಶೆಯನ್ನು ನೋಡುವ ರೀತಿ ಯಾವುದು? ಅದರ ಕುರಿತು ನಿಮ್ಮ ನಿರೀಕ್ಷೆ, ಅಪೇಕ್ಷೆಗಳು ಏನು?**

ಒಂದು ಸೃಜನಶೀಲ ಕೃತಿಯ ಅರ್ಥವ್ಯಾಪ್ತಿಯಲ್ಲಿ ಕೃತಿಕಾರನ ಅರಿವಿಗೂ ಬಾರದ ಕೆಲವು ಸಂಗತಿಗಳಿರುತ್ತಾವೆ. ಇದು, ಭಾಷೆ ಮತ್ತು ಸಂಸ್ಕೃತಿಯು ನಮ್ಮ ಸುಪ್ತಪ್ರಜ್ಞೆಯನ್ನು ರೂಪಿಸಿರುವುದರಿಂದ ಆಗುವಂಥದ್ದು. ನಮ್ಮ ಅತ್ಯುತ್ತಮ ವಿಮರ್ಶಕರು ಕೃತಿಯ ಇಂಥ ಮಗ್ಗಲುಗಳನ್ನು ತೋರಿಸುವಲ್ಲಿ, ಅವುಗಳನ್ನು ಅರ್ಥೈಸುವಲ್ಲಿ ಅತ್ಯಂತ ಮುಖ್ಯವಾದ ಕೆಲಸ ಮಾಡಿದ್ದಾರೆ. ಒಂದು ಆರೋಗ್ಯಪೂರ್ಣ ಸಾಹಿತ್ಯ ಸಂದರ್ಭದಲ್ಲಿ ವಿಮರ್ಶೆ ಮತ್ತು ಸೃಜನಶೀಲ ಸಾಹಿತ್ಯ ಪೂರಕವಾಗಿರುತ್ತವೆ ಮತ್ತು ಆಳದಲ್ಲಿ ಪರಸ್ಪರ ಸವಾಲು–ಜವಾಬುಗಳಲ್ಲಿ ತೊಡಗಿರುತ್ತವೆ. ಯಾರದೇ ಕೃತಿಯ ಕುರಿತಾಗಿದ್ದರೂ, ಒಂದು ಉತ್ತಮ ವಿಮರ್ಶೆ ನನಗೆ ಏನನ್ನೋ ಖಂಡಿತ ಒದಗಿಸುತ್ತದೆ. ಅಷ್ಟೇ ಅಲ್ಲ, ದಶಕಗಳ ಹಿಂದಿನ ಸಾಹಿತ್ಯ ವಿಮರ್ಶೆಯೂ ಪ್ರಸ್ತುತವೇ. ಒಬ್ಬ ಸೃಜನಶೀಲ ಲೇಖಕನಾಗಿ ಇದು ನನಗೆ ಅತ್ಯಂತ ಮುಖ್ಯ. ತಮ್ಮ ಕೃತಿಯ ವಿಮರ್ಶೆಗೆ ಕಾಯುತ್ತ, ಅದರಿಂದ ಮಾತ್ರ ಕಲಿಯಬಯಸುವ ಲೇಖಕ ಬಹಳ ದೂರ ಹೋಗುವುದಿಲ್ಲ. ಹೊಸಬರನ್ನು ಓದಿಗೆ ಪ್ರಚೋದಿಸುವಾಗ ಕೇವಲ ಕತೆ, ಕಾದಂಬರಿಗಳನ್ನು ಮಾತ್ರ ಹೆಸರಿಸುವುದು ಪರಿಪಾಠವಾಗಿದೆ. ಅವರು ಕನ್ನಡದ ವಿಮರ್ಶೆಯನ್ನೂ ಸಹ ಓದುವ ಅಗತ್ಯವಿದೆ. ವಿಮರ್ಶೆ ಅಕೆಡೆಮಿಕ್ ವಲಯದವರಿಗೆ ಮಾತ್ರ ಎಂಬ ಪೂರ್ವಗ್ರಹದಿಂದ ಹೊರಬರಬೇಕು.

- **ತರುಣ ಪೀಳಿಗೆ ವಿಮರ್ಶೆಗೆ ಯಾಕೆ ಹಿಂಜರಿಯುತ್ತಿದೆ?**

ವಿಮರ್ಶೆಯೆಂದರೆ ಮುನ್ನೂರು ಶಬ್ದಗಳಲ್ಲಿ ಸಾರಾಂಶ ಹೇಳಿ ಪುಸ್ತಕ ಪರಿಚಯ ಮಾಡಿಸುವುದಲ್ಲ. ಸಾಹಿತ್ಯ ವಿಮರ್ಶೆಗೆ ಸತತ ಅಧ್ಯಯನ ಮತ್ತು ಪ್ರತಿಭೆ ಬೇಕು. ಕನ್ನಡದ ಅತ್ಯುತ್ತಮ ವಿಮರ್ಶೆಯನ್ನು ಓದಿದರೆ ಅದರ ಹಿಂದಿನ ಓದಿನ ಆಳ ಗೊತ್ತಾಗುತ್ತದೆ. ಇಂಥ ಶ್ರಮದ ಫಲ ದೊರಕುವುದಕ್ಕೆ ಸಮಯ ಬೇಕು. ಒಟ್ಟೂ ಅವಸರದಲ್ಲಿರುವ ನಮ್ಮ ತರುಣಪೀಳಿಗೆಗೆ ಇದು